

بِسْمِ اللّٰهِ الرَّحْمَنِ الرَّحِيمِ

# ನೆನಪಿನಲ್ಲಿಡಬೇಕಾದ ಕೆಲವು ಪ್ರಮುಖ ಪ್ರಾರ್ಥನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **15–06–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸ್ಸಲ್ಲಮ್ ಜುಮುಅದ ಮಹತ್ವವನ್ನು ವಿವರಿಸುತ್ತಾ ಒಂದು ಸಂದರ್ಭದಲ್ಲಿ ಹೇಳಿದರು: ಜುಮುಅದ ದಿವಸ ಎಂತಹ ಒಂದು ಗಳಿಗೆ ಬರುತ್ತಿದೆ ಎಂದರೆ ಆ ಸಮಯ ಮುಸ್ಲಿಮನು ನಮಾಝ್ ಮಾಡುತ್ತಾ ಇದ್ದರೆ ಆಗ ಮಾಡುವ ದುಆ ಅಲ್ಲಾಹನಿಂದ ಅಂಗೀಕಾರ ಪಡೆಯುತ್ತದೆ. ಅವನು ಬೇಡುವ ಒಳಿತುಗಳು ಅವನಿಗೆ ನೀಡಲ್ಪಡುತ್ತವೆ. ಇದರ ಬಗ್ಗೆ ವಿಶದೀಕರಿಸುತ್ತಾ ಕೆಲವು ಜನರು ಹೇಳುತ್ತಾರೆ: ಜುಮುಅದ ಖುತ್‌ಬ ಸಹ ನಮಾಝಿನ ಭಾಗವಾಗಿದೆ. ಆದುದರಿಂದ ಖುತ್‌ಬದ ಸಮಯ ಸಹ ದುಆ ಅಂಗೀಕಾರ ಪಡೆಯುವ ಸಮಯದಲ್ಲಿ ಸೇರಿದೆ. ಏನಿದ್ದರೂ ಜುಮುಅದ ದಿನಕ್ಕೆ ವಿಶಿಷ್ಟವಾದೊಂದು ಮಹತ್ವವಿದೆ. ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಹೊರತು ಪ್ರತಿಯೊಬ್ಬ ಪ್ರಜ್ಞಾವಂತ ಪ್ರಾಪ್ತವಯಸ್ಕನಾದ ಪುರುಷನು ಆವಶ್ಯಕವಾಗಿ ಜುಮುಅ ನಮಾಝ್‌ನಲ್ಲಿ ಭಾಗವಹಿಸಬೇಕು. ನಮಾಝಿನಲ್ಲಿ ಪ್ರತಿಯೊಬ್ಬನು ತನ್ನ ಯೋಚನೆಗನುಸಾರವಾಗಿ ಮತ್ತು ತನ್ನ ಆವಶ್ಯಕತೆಗೆ ಅನುಸಾರವಾಗಿ ದುಆ ಮಾಡುತ್ತಾನೆ. ಕೆಲವು ಜನರು ಹೇಗಿದ್ದಾರೆಂದರೆ ಅವರು ನಮಾಝ್ ನಿರ್ವಹಿಸುತ್ತಾರಾದರೂ ದುಆ ಮಾಡುವ ಬಗ್ಗೆ ವಿಶಿಷ್ಟವಾದ ಆಸಕ್ತಿ ಅವರಲ್ಲಿ ಇರುವುದಿಲ್ಲ. ಅವರು ನಮಾಝ್ ನಿರ್ವಹಿಸುತ್ತಾರೆ. ದುಆ ಶಬ್ದಗಳನ್ನು ಪುನರಾವರ್ತಿಸುತ್ತಾರೆ. ಆದರೆ ಅವರಿಗೆ ದುಆದ ಮಹತ್ವದ ಬಗ್ಗೆ ತಿಳಿದಿರುವುದಿಲ್ಲ. ಆದುದರಿಂದ ನಾನು ಈದಿನ ರಮಝಾನಿನ ಈ ಕೊನೆಯ ಜುಮುಅದಲ್ಲಿ ಕೆಲವು ದುಆಗಳನ್ನು ಪಠಿಸಲು ನಿರ್ಧರಿಸಿರುತ್ತೇನೆ. ಆ ಮೂಲಕ ದುಆದ ಬಗ್ಗೆ ಹೆಚ್ಚು ಆಸಕ್ತಿ ಇಲ್ಲದವರು ಸಹ ಏನೆಲ್ಲಾ ದುಆಗಳಿವೆ ಎಂದು ತಿಳಿದುಕೊಳ್ಳಲು ಮತ್ತು ಜಮಾಅತ್ ನೆಲೆಯಲ್ಲಿ ನಾವು ಅಲ್ಲಾಹನ ಸನ್ನಿಧಿಯಲ್ಲಿ ನಮ್ಮ ಪ್ರಾರ್ಥನೆಗಳನ್ನೂ ಬೇಡಿಕೆಗಳನ್ನೂ ಸಮರ್ಪಿಸಲು ಸಾಧ್ಯವಾಗುವುದು. ಅನಂತರ ನಮಾಝ್‌ನಲ್ಲಿ ಈ ದುಆಗಳು ಅಂಗೀಕರಿಸಲ್ಪಡಲಿ ಎಂದು ನಾವು ಒಗ್ಗೂಡಿ ಪ್ರಾರ್ಥಿಸಬೇಕು. ಈ ದುಆಗಳಲ್ಲಿ ಪವಿತ್ರ ಖುರ್‌ಆನಿನ ಕೆಲವು ದುಆಗಳಿವೆ. ಕೆಲವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿದ ದುಆಗಳಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ದುಆಗಳು ಸಹ ಇವೆ. ಬೇರೆ ಕೆಲವು ಸಾಮಾನ್ಯವಾಗಿ ಬೇಡಿಕೊಳ್ಳುವ ದುಆಗಳಾಗಿವೆ. ನಾನು ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದುಆಗಳನ್ನು ಪಠಿಸುವಾಗ ಆ ದುಆಗಳನ್ನು ನೆನಪಿನಲ್ಲಿಟ್ಟವರು ಅವುಗಳನ್ನು ಹೃದಯದಲ್ಲಿ ಪುನರಾವರ್ತಿಸಲಿ. ನನ್ನೊಂದಿಗೆ ಪುನರಾವರ್ತಿಸಲು ಸಾಧ್ಯವಿರುವವರು ನಿಸ್ಸಂಶಯವಾಗಿ ಹೃದಯದಲ್ಲಿ ಪುನರಾವರ್ತಿಸಲಿ ಮತ್ತು ಪ್ರತಿಯೊಂದು ದುಆದ ನಂತರ ಮನಸ್ಸಿನಲ್ಲಿಯೇ ಆಮೀನ್ ಎಂದು ಸಹ ಹೇಳಲಿ. ಅಲ್ಲಾಹನು ನಮ್ಮ ದುಆಗಳನ್ನು ಅಂಗೀಕರಿಸುವವನಾಗಲಿ.

سُبْحَانَ اللّٰهِ وَبِحَمْدِهِ، سُبْحَانَ اللّٰهِ الْعَظِيمِ اللّٰهُمَّ صَلِّ عَلَى مُحَمَّدٍ، وَعَلَى آلِ مُحَمَّدٍ،

**(ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದ್.)**

ಪವಿತ್ರ ಖುರ್‌ಆನಿನ ದುಆಗಳು:

رَبَّنَآ اٰتِنَا فِي الدُّنْيَا حَسَنَةً وَّفِي الْاٰخِرَةِ حَسَنَةً وَّقِنَا عَذَابَ النَّارِ

**(ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದ್ಝಾಬನ್ನಾರ್.)**

ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು. ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು. (2:202).

رَبَّنَآ اَفْرِغْ عَلَيْنَا صَبْرًا وَّتَوَفَّنَا مُسْلِمِيْنَ

**(ರಬ್ಬನಾ ಅಫ್‌ರಿಗ್ ಅಲೈನಾ ಸಬ್‌ರನ್ ವ ತವಫ್ಫನಾ ಮುಸ್ಲಿಮೀನ್.)**

ನಮ್ಮ ಪ್ರಭೂ, ನೀನು ನಮಗೆ ಸ್ಥಿರಚಿತ್ತವನ್ನು ದಯಪಾಲಿಸು, ನಾವು ನಿನಗೆ ವಿಧೇಯರಾಗಿದ್ದುಕೊಂಡಿರುವ ಸ್ಥಿತಿಯಲ್ಲಿ ನೀನು ನಮಗೆ ಮರಣವನ್ನು ಕರುಣಿಸು. (7:127).

رَبَّنَآ اَنْزِلْ عَلَيْنَا مَآئِدَةً مِّنَ السَّمَآءِ تَكُوْنُ لَنَا عِيْدًا لِّاَوَّلِنَا وَاٰخِرِنَا وَاٰيَةً مِّنْكَ وَارْزُقْنَا وَاَنْتَ خَيْرُ الرّٰزِقِيْنَ

**(ರಬ್ಬನಾ ಅನ್‌ಝಿಲ್ ಅಲೈನಾ ಮಾಯಿದತನ್ ಮಿನಸ್ಸಮಾಇ ತಕೂನು ಲನಾ ಈದನ್ ಲಿ ಅವ್ವಲಿನಾ ವ ಆಖಿರಿನಾ ವ ಆಯತನ್ ಮಿನ್‌ಕ ವರ್‌ಝುಖ್‌ನಾ ವ ಅನ್‌ತ ಖೈರುರ್ರಾಝಿಖೀನ್.)**

ಓ ಅಲ್ಲಾಹ್, ನಮ್ಮ ಪ್ರಭೂ, ನಮಗೋಸ್ಕರ ಆಕಾಶದಿಂದ ಆಹಾರ ತುಂಬಿದ ಒಂದು ಹರಿವಾಣವನ್ನು ಇಳಿಸಿಕೊಡು. ಅದು ನಮ್ಮ ಮೊದಲ ಪೀಳಿಗೆಯವರಿಗೂ ನಂತರದ ಪೀಳಿಗೆಯವರಿಗೂ ಹಬ್ಬವೂ ನಿನ್ನಿಂದ ಒಂದು ದೃಷ್ಟಾಂತವೂ ಆಗಲಿ. ನೀನು ನಮಗೆ ಆಹಾರವನ್ನು ದಯಪಾಲಿಸು. ಅನ್ನದಾತರಲ್ಲಿ ನೀನು ಅತ್ಯುತ್ತಮನಷ್ಟೆ. (5:115).

رَّبَّنَآ اِنَّنَا سَمِعْنَا مُنَادِيًا يُّنَادِي لِلْاِيْمَانِ اَنْ اٰمِنُوْا بِرَبِّكُمْ فَاٰمَنَّا ۖ رَبَّنَا فَاغْفِرْ لَنَا ذُنُوْبَنَا وَكَفِّرْ عَنَّا سَيِّاٰتِنَا وَتَوَفَّنَا مَعَ الْاَبْرَارِ

**(ರಬ್ಬನಾ ಇನ್ನನಾ ಸಮಿಅ್‌ನಾ ಮುನಾದಿಯ್ಯನ್ ಯುನಾದಿ ಲಿಲ್‌ಈಮಾನಿ ಅನ್ ಆಮಿನೂ ಬಿರಬ್ಬಿಕುಮ್ ಫ ಆಮನ್ನಾ ರಬ್ಬನಾ ಫಗ್‌ಫಿರ್‌ಲನಾ ಝುನೂಬನಾ ವ ಕಫ್ಫಿರ್ ಅನ್ನಾ ಸಯ್ಯಿಆತಿನಾ ವತವಫ್ಫನಾ ಮಅಲ್ ಅಬ್‌ರಾರ್.)**

ನಮ್ಮ ಪ್ರಭೂ, ಸತ್ಯವಿಶ್ವಾಸದೆಡೆಗೆ ಆಹ್ವಾನಿಸುವ, 'ನೀವು ನಿಮ್ಮ ಪ್ರಭುವಿನ ಮೇಲೆ ವಿಶ್ವಾಸವಿರಿಸಿರಿ' ಎಂದು ಕರೆನೀಡುವ ಓರ್ವ ಉಪದೇಶಕನ ಕರೆಯನ್ನು ನಾವು ಆಲಿಸಿದೆವು. ಹಾಗೆ ನಾವು ಅದರಲ್ಲಿ ವಿಶ್ವಾಸವಿಟ್ಟಿದ್ದೇವೆ. ನಮ್ಮ ಪ್ರಭೂ, ಆದ್ದರಿಂದ ನಮ್ಮ ಪಾಪಗಳನ್ನು ನಮಗೆ ಕ್ಷಮಿಸಿಕೊಡು; ನಮ್ಮ

ಕೆಡುಕುಗಳನ್ನು ನಮ್ಮಿಂದ ದೂರಮಾಡು, ಹಾಗೂ ಸಜ್ಜನರ ಜೊತೆಯಲ್ಲಿ (ಸಜ್ಜನರನ್ನಾಗಿ ಮಾಡಿ) ನಮ್ಮನ್ನು ಮರಣಪಡಿಸು. (3:194).

رَبَّنَا آمَنَّا بِمَا أَنزَلْتَ وَاتَّبَعْنَا الرَّسُولَ فَاكْتُبْنَا مَعَ الشَّاهِدِينَ

**(ರಬ್ಬನಾ ಆಮನ್ನಾ ಬಿಮಾ ಅನ್‌ಝುಲ್‌ತ ವತ್ತಬಅ್‌ನರ್‌ರಸೂಲ ಫಕ್‌ತುಬ್‌ನಾ ಮಅಶ್ಶಾಹಿದೀನ್.)**

ನಮ್ಮ ಪ್ರಭೂ, ನೀನು ಅವತೀರ್ಣ ಗೊಳಿಸಿರುವುದನ್ನು ನಾವು ನಂಬಿದ್ದೇವೆ ಮತ್ತು ನಾವು ಈ ಪ್ರವಾದಿಯನ್ನು ಅನುಸರಿಸುತ್ತಿದ್ದೇವೆ. ಆದುದರಿಂದ ಸಾಕ್ಷ್ಯ ನೀಡುವವರೊಂದಿಗೆ ನಮ್ಮ ಹೆಸರನ್ನೂ ನೀನು ದಾಖಲಿಸು. (3:54).

رَبَّنَا لَا تُزِغْ قُلُوبَنَا بَعْدَ إِذْ هَدَيْتَنَا وَهَبْ لَنَا مِن لَّدُنكَ رَحْمَةً ۚ إِنَّكَ أَنتَ الْوَهَّابُ

**(ರಬ್ಬನಾ ಲಾತುಝಿಗ್ ಖುಲೂಬುನಾ ಬಅ್‌ದ ಇಝ್ ಹದೈತನಾ ವ ಹಬ್‌ಲನಾ ಮಿನ್‌ಲ್ಲದುನ್‌ಕ ರಹ್‌ಮತನ್ ಇನ್ನಕ ಅಂತಲ್ ವಹ್ಹಾಬ್.)**

ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ನೀಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿದೊಡ್ಡ ಅನುಗ್ರಹದಾತ. (3:9).

رَبِّ هَبْ لِي مِن لَّدُنكَ ذُرِّيَّةً طَيِّبَةً ۖ إِنَّكَ سَمِيعُ الدُّعَاءِ

**(ರಬ್ಬಿ ಹಬ್‌ಲೀ ಮಿನ್‌ಲ್ಲದುನ್‌ಕ ಝುರ್‍ರಿಯತನ್ ತಯ್ಯಿಬತನ್ ಇನ್ನಕ ಸಮೀಉದ್ದುಆಅ್.)**

ನನ್ನ ಪ್ರಭೂ, ನೀನು ನನಗೆ ನಿನ್ನ ಕಡೆಯಿಂದ ಪರಿಶುದ್ಧರಾದ ಸಂತಾನಗಳನ್ನು ಪ್ರದಾನ ಮಾಡು; ನಿಶ್ಚಯವಾಗಿಯೂ ನೀನು ಪ್ರಾರ್ಥನೆಯನ್ನು ಆಲಿಸುವವನಷ್ಟೆ. (3:39).

رَبَّنَا هَبْ لَنَا مِنْ أَزْوَاجِنَا وَذُرِّيَّاتِنَا قُرَّةَ أَعْيُنٍ وَاجْعَلْنَا لِلْمُتَّقِينَ إِمَامًا

**(ರಬ್ಬನಾ ಹಬ್‌ಲನಾ ಮಿನ್ ಅಝ್‌ವಾಜಿನಾ ವ ಝುರ್‍ರಿಯಾತಿನಾ ಖುರ್‍ರತಅಅ್‌ಯುನಿನ್ ವಜ್‌ಅಲ್‌ನಾ ಲಿಲ್‌ಮುತ್ತಖೀನ ಇಮಾಮ.)**

ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು. (25:75).

رَبِّ أَوْزِعْنِي أَنْ أَشْكُرَ نِعْمَتَكَ الَّتِي أَنْعَمْتَ عَلَيَّ وَعَلَىٰ وَالِدَيَّ وَأَنْ أَعْمَلَ صَالِحًا تَرْضَاهُ وَأَصْلِحْ لِي فِي ذُرِّيَّتِي ۖ إِنِّي تُبْتُ إِلَيْكَ وَإِنِّي مِنَ الْمُسْلِمِينَ

**(ರಬ್ಬಿ ಅವ್‌ಝಿಉಅ್‌ನೀ ಅನ್ ಅಶ್‌ಕುರ ನಿಅ್‌ಮತಕಲ್ಲತೀ ಅನ್‌ಅಮ್‌ತ ಅಲೈಯ್ಯ ವ ಅಲಾ ವಾಲಿದಯ್ಯ ವ ಅನ್ ಅಅ್‌ಮಲ ಸಾಲಿಹನ್ ತರ್‌ಝಾಹು ವ ಅಸ್‌ಲಿಹ್ ಲೀ ಫೀ ಝುರ್‍ರಿಯತೀ ಇನ್ನೀ ತುಬ್‌ತು ಇಲೈಕ ವಇನ್ನೀ ಮಿನಲ್ ಮುಸ್ಲಿಮೀನ್.)**

ನನ್ನ ಪ್ರಭೂ, ನೀನು ನನಗೆ ಮತ್ತು ನನ್ನ ಮಾತಾಪಿತರಿಗೆ ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸಲಿಕ್ಕೂ ನೀನು ಇಷ್ಟಪಡುವ ಸತ್ಕರ್ಮಗಳನ್ನು ಮಾಡಲಿಕ್ಕೂ ನನಗೆ ಶಕ್ತಿಯನ್ನು ದಯಪಾಲಿಸು. ನನಗೋಸ್ಕರ ನನ್ನ ಸಂತತಿಗಳನ್ನು ಧರ್ಮನಿಷ್ಠರನ್ನಾಗಿ ಮಾಡು. ನಾನು ನಿನ್ನ ಕಡೆಗೆ ತಿರುಗುತ್ತೇನೆ. ನಾನು ನಿನಗೆ ಶರಣಾಗುವವರೊಂದಿಗೆ ಸೇರಿದ್ದೇನೆ. (46:16).

رَبِّ هَبْ لِي مِنَ الصَّالِحِينَ **(ರಬ್ಬಿ ಹಬ್‌ಲೀ ಮಿನಸ್ಸಾಲಿಹೀನ್)** ನನ್ನ ಪ್ರಭೂ, ನನಗೆ ಸಾತ್ವಿಕರನ್ನು ವಾರೀಸುದಾರರನ್ನಾಗಿ ಮಾಡು. (37:101).

رَبِّ إِنِّي لِمَا أَنزَلْتَ إِلَيَّ مِنْ خَيْرٍ فَقِيرٌ **(ರಬ್ಬಿ ಇನ್ನೀ ಲಿಮಾ ಅನ್‌ಝುಲ್‌ತ ಇಲೈಯ್ಯ ಮಿನ್‌ಖೈರಿನ್ ಫಖೀರ್)** ನನ್ನ ಪ್ರಭೂ, ನೀನು ನನಗೆ ಯಾವುದೇ ಗುಣಕರವಾದ ಕೊಡುಗೆಯನ್ನು ಇಳಿಸಿಕೊಟ್ಟರೂ ನಾನು ಅದರ ಬೇಡಿಕೆಯುಳ್ಳವನಾಗಿದ್ದೇನೆ. (28:25).

رَبِّ أَوْزِعْنِي أَنْ أَشْكُرَ نِعْمَتَكَ الَّتِي أَنْعَمْتَ عَلَيَّ وَعَلَىٰ وَالِدَيَّ وَأَنْ أَعْمَلَ صَالِحًا تَرْضَاهُ وَأَدْخِلْنِي بِرَحْمَتِكَ فِي عِبَادِكَ الصَّالِحِينَ

**(ರಬ್ಬಿ ಅವ್‌ಝಿಉಅ್‌ನೀ ಅನ್ ಅಶ್‌ಕುರ ನಿಅ್‌ಮತಕಲ್ಲತೀ ಅನ್‌ಅಮ್‌ತ ಅಲೈಯ್ಯ ವ ಅಲಾ ವಾಲಿದಯ್ಯ ವ ಅನ್ ಅಅ್‌ಮಲ ಸಾಲಿಹನ್ ತರ್‌ಝಾಹು ವ ಅದ್‌ಖಿಲ್‌ನೀ ಬಿರಹ್‌ಮತಿಕ ಫೀ ಇಬಾದಿಕ ಸ್ಸಾಲಿಹೀನ್.)**

ನನ್ನ ಪ್ರಭೂ, ನೀನು ನನಗೂ ನನ್ನ ಮಾತಾಪಿತರಿಗೂ ನೀಡಿದ ಅನುಗ್ರಹಕ್ಕೆ ಕೃತಜ್ಞತೆ ಸಲ್ಲಿಸಲು ನನಗೆ ಸೌಭಾಗ್ಯವನ್ನು ದಯಪಾಲಿಸು. ನೀನು ಮೆಚ್ಚುವ ಸತ್ಕಾರ್ಯಗಳನ್ನು ನಾನು ಮಾಡುವಂತಾಗಲಿ. ನಿನ್ನ ಕರುಣೆಯಿಂದ ನಿನ್ನ ಸಜ್ಜನರಾದ ಭಕ್ತದಾಸರಲ್ಲಿ ನೀನು ನನ್ನನ್ನು ಸೇರಿಸು. (27:20).

رَّبِّ زِدْنِي عِلْمًا **(ರಬ್ಬಿ ಝಿದ್‌ನೀ ಇಲ್‌ಮಾ)** ನನ್ನ ಪ್ರಭೂ ನನ್ನ ಜ್ಞಾನವನ್ನು ಹೆಚ್ಚಿಸು. (20:115).

رَبِّ اشْرَحْ لِي صَدْرِي - وَيَسِّرْ لِي أَمْرِي - وَاحْلُلْ عُقْدَةً مِّن لِّسَانِي - يَفْقَهُوا قَوْلِي

**(ರಬ್ಬಿಶ್‌ರಹ್‌ಲೀ ಸದ್‌ರೀ, ವಯಸ್ಸಿರ್‌ಲೀ ಅಮ್‌ರೀ, ವಹ್‌ಲುಲ್ ಉಖ್‌ದತನ್ ಮಿಲ್ಲಿಸಾನಿ, ಯಫ್‌ಖಹೂ ಖೌಲೀ.)**

ನನ್ನ ಪ್ರಭೂ, ನನ್ನ ಹೃದಯವನ್ನು ನೀನು ವಿಶಾಲಗೊಳಿಸು. ನನ್ನ ಕಾರ್ಯಭಾರ ನೀನು ಸುಲಭಗೊಳಿಸು. ನನ್ನ ನಾಲಗೆಯ ತೊಡಕನ್ನು ನೀಗಿಸು. ನನ್ನ ಮಾತನ್ನು ಅವರು ತಿಳಿಯುವಂತಾಗಲಿ. (20:26–29).

رَبَّنَا آتِنَا مِن لَّدُنكَ رَحْمَةً وَهَيِّئْ لَنَا مِنْ أَمْرِنَا رَشَدًا

**(ರಬ್ಬನಾ ಆತಿನಾ ಮಿನ್‌ಲ್ಲದುನ್‌ಕ ರಹ್ಮತನ್ ವ ಹಯ್ಯಿಅ್ ಲನಾ ಮಿನ್ ಅಮ್‌ರಿನಾ ರಶದ.)**

ನಮ್ಮ ಪ್ರಭೂ, ನೀನು ನಮ್ಮ ಮೇಲೆ ಕರುಣೆಯನ್ನು ತೋರಿಸು. ನಮ್ಮ ವಿಚಾರದಲ್ಲಿ ನೀನು ನಮಗೆ ಮಾರ್ಗದರ್ಶನ ಮಾಡು. (18:11).

رَّبِّ ارْحَمْهُمَا كَمَا رَبَّيَانِي صَغِيرًا **(ರಬ್ಬಿರ್‌ಹಮ್‌ಹುಮಾ ಕಮಾ ರಬ್ಬಯಾನೀ ಸಗೀರ)** ಕರುಣೆಯಿಂದ ಕೂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಡು ಹಾಗೂ ನನ್ನ ಪ್ರಭೂ, ಅವರೀರ್ವರೂ ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆ ದೋರು. (17:25).

رَبِّ إِنِّي ظَلَمْتُ نَفْسِي فَاغْفِرْ لِي **(ರಬ್ಬಿ ಇನ್ನೀ ಝಲಮ್‌ತು ನಫ್‌ಸೀ ಫಗ್‌ಫರ್‌ಲೀ)** ನನ್ನ ಪ್ರಭೂ, ನಾನು ನನ್ನ ಆತ್ಮಕ್ಕೆ ದ್ರೋಹವೆಸಗಿದ್ದೇನೆ. ಆದ್ದರಿಂದ ನನ್ನನ್ನು ಕ್ಷಮಿಸು.(28:17).

رَبَّنَا أَتْمِمْ لَنَا نُورَنَا وَاغْفِرْ لَنَا ۖ إِنَّكَ عَلَىٰ كُلِّ شَيْءٍ قَدِيرٌ

**(ರಬ್ಬನಾ ಅತ್‌ಮಿಮ್ ಲನಾ ನೂರನಾ ವಗ್‌ಫಿರ್‌ಲನಾ ಇನ್ನಕ ಅಲಾ ಕುಲ್ಲಿಶೈಇನ್ ಖದೀರ್.)**

ನಮ್ಮ ಪ್ರಭೂ, ನಮ್ಮ ಪ್ರಕಾಶವನ್ನು ನೀನು ನಮಗೆ ಪೂರ್ಣಗೊಳಿಸು; ನಮಗೆ ನೀನು ಕ್ಷಮೆ ನೀಡು. ಖಂಡಿತವಾಗಿಯೂ ನೀನು ಸರ್ವ ಸಮರ್ಥನಾಗಿರುವೆ. (66:9).

رَبِّ اجْعَلْنِي مُقِيمَ الصَّلَاةِ وَمِن ذُرِّيَّتِي ۚ رَبَّنَا وَتَقَبَّلْ دُعَاءِ - رَبَّنَا اغْفِرْ لِي وَلِوَالِدَيَّ وَلِلْمُؤْمِنِينَ يَوْمَ يَقُومُ الْحِسَابُ

**(ರಬ್ಬಿಜ್‌ಅಲ್‌ನೀ ಮುಖೀಮಸ್ಸಲಾತಿ ವ ಮಿನ್ ಝುರ್‍ರಿಯ್ಯತೀ, ರಬ್ಬನಾ ವ ತಖಬ್ಬಲ್ ದುಆಅ್. ರಬ್ಬನಗ್‌ಫಿರ್‌ಲೀ ವಲಿವಾಲಿದಯ್ಯ ವಲಿಲ್ ಮೂಮಿನೀನ ಯೌಮ ಯಖೂಮುಲ್ ಹಿಸಾಬ್.)**

ನನ್ನ ಪ್ರಭೂ, ನೀನು ನನ್ನನ್ನು, ಪ್ರಾರ್ಥನೆಯನ್ನು ನಿಷ್ಠೆಯಿಂದ ನಿರ್ವಹಿಸುವವನನ್ನಾಗಿ ಮಾಡು; ನನ್ನ ಸಂತಾನಗಳನ್ನು ಸಹ. ನಮ್ಮ ಪ್ರಭೂ, ನನ್ನ ಪ್ರಾರ್ಥನೆಯನ್ನು ನೀನು ಸ್ವೀಕರಿಸು. ನಮ್ಮ ಪ್ರಭೂ, ವಿಚಾರಣೆಯ ದಿನದಂದು ನೀನು ನನಗೂ ನನ್ನ ಮಾತಾಪಿತರಿಗೂ ಸತ್ಯವಿಶ್ವಾಸಿಗಳಿಗೂ ಕ್ಷಮೆ ನೀಡು. (14:41,42).

رَبَّنَا أَفْرِغْ عَلَيْنَا صَبْرًا وَثَبِّتْ أَقْدَامَنَا وَانصُرْنَا عَلَى الْقَوْمِ الْكَافِرِينَ

**(ರಬ್ಬನಾ ಅಫ್‌ರಿಗ್ ಅಲೈನಾ ಸಬ್‌ರನ್ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್.)**

ನಮ್ಮ ಪ್ರಭೂ, ನಮಗೆ ನೀನು ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (2:251).

رَبَّنَا اغْفِرْ لَنَا ذُنُوبَنَا وَإِسْرَافَنَا فِي أَمْرِنَا وَثَبِّتْ أَقْدَامَنَا وَانصُرْنَا عَلَى الْقَوْمِ الْكَافِرِينَ

**(ರಬ್ಬನಗ್‌ಫಿರ್‌ಲನಾ ಝುನೂಬನಾ ವ ಇಸ್‌ರಾಫನಾ ಫೀ ಅಮ್‌ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್.)**

ಓ ನಮ್ಮ ಪ್ರಭೂ, ನಮ್ಮ ಪಾಪಗಳನ್ನು ಕ್ಷಮಿಸು ಮತ್ತು ನಮಗೆ ಸಂಬಂಧಿಸಿದ ವಿಷಯಗಳಲ್ಲಿ ಅತಿರೇಕವರ್ತನೆಯನ್ನು ಕ್ಷಮಿಸು. ನಮ್ಮ ಪಾದಗಳಿಗೆ ಸ್ಥಿರತೆ ನೀಡು ನಮಗೆ ಅವಿಶ್ವಾಸಿಗಳ ವಿರುದ್ಧ ಸಹಾಯ ನೀಡು. (3:148).

رَبَّنَا لَا تَجْعَلْنَا فِتْنَةً لِلْقَوْمِ الظَّالِمِينَ وَنَجِّنَا بِرَحْمَتِكَ مِنَ الْقَوْمِ الْكَافِرِينَ

**(ರಬ್ಬನಾ ಲಾ ತಜ್‌ಅಲ್‌ನಾ ಫಿತ್‌ನತನ್ ಲಿಲ್‌ಖೌಮಿಝ್ಝಾಲಿಮೀನ್. ವನಜ್ಜಿನಾ ಬಿರಹ್ಮತಿಕ ಮಿನಲ್ ಖೌಮಿಲ್ ಕಾಫಿರೀನ್.)**

ಓ ನಮ್ಮ ಪ್ರಭೂ, ನಮ್ಮನ್ನು ಅಕ್ರಮಿಗಳಾದ ಜನರಿಗೆ ಪರೀಕ್ಷೆಯನ್ನಾಗಿ ಮಾಡದಿರು. ನೀನು ನಿನ್ನ ಕಾರುಣ್ಯದಿಂದ ನಮ್ಮನ್ನು ಅವಿಶ್ವಾಸಿಗಳಿಂದ ರಕ್ಷಿಸು. (10:86,87)

رَبِّ انْصُرْنِي بِمَا كَذَّبُونِ **(ರಬ್ಬಿನ್‌ಸುರ್‌ನೀ ಬಿಮಾ ಕಝ್ಝುಬೂನ್)** ಓ ನನ್ನ ಪ್ರಭೂ, ಅವರು ನನ್ನನ್ನು ಸುಳ್ಳುಗಾರನೆಂದು ಆಪಾದಿಸುವರು. ನೀನು ನನಗೆ ನೆರವು ನೀಡು. (23:27)

ಇನ್ನು ಕೆಲವು ಹದೀಸುಗಳ ಪ್ರಾರ್ಥನೆಗಳನ್ನು ಉಚ್ಚರಿಸುವೆನು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ದುಆಗಳನ್ನು ಕಲಿಸಿರುವರು: ಓ ಅಲ್ಲಾಹ್ ನನ್ನ ಎಲ್ಲಾ ತಪ್ಪುಗಳನ್ನು ಕ್ಷಮಿಸು. ನನ್ನ ಅಜ್ಞಾನದಿಂದ, ಮೌಢ್ಯದಿಂದ ನಾನು ಮಾಡಿದ ತಪ್ಪು ಕೃತ್ಯಗಳ ದೋಷಫಲದಿಂದ ನನ್ನನ್ನು ರಕ್ಷಿಸು. ನನಗಿಂತ ನೀನು ಚೆನ್ನಾಗಿ ತಿಳಿದಿರುವ ಹಾನಿಗಳಿಂದ, ನಷ್ಟಗಳಿಂದ ದೋಷಗಳಿಂದ ನನ್ನನ್ನು ರಕ್ಷಿಸು. ಓ ಅಲ್ಲಾಹ್, ನಾನು ಮಾಡಿದ ಎಲ್ಲಾ ತಪ್ಪು ಕೃತ್ಯಗಳನ್ನು ಕ್ಷಮಿಸು. ನಾನು ತಿಳಿದು ಮತ್ತು ತಿಳಿಯದೆ ಮಾಡಿದ ತಪ್ಪುಗಳನ್ನು ಮತ್ತು ತಮಾಷೆಗಾಗಿ ಮಾಡಿದ ತಪ್ಪುಗಳನ್ನೂ ಕ್ಷಮಿಸು. ಇವುಗಳೆಲ್ಲಾ ನನ್ನ ಒಳಗಿವೆ. ನಾನು ಮಾಡಿದ ತಪ್ಪುಗಳು, ನಾನು ಮಾಡಲಿರುವ ತಪ್ಪುಗಳು, ನನ್ನಿಂದ ರಹಸ್ಯವಾಗಿ ಸಂಭವಿಸಿದ ತಪ್ಪುಗಳು, ಬಹಿರಂಗವಾಗಿ ಮಾಡಿದ ತಪ್ಪುಗಳು ಇವುಗಳನ್ನೆಲ್ಲಾ ಕ್ಷಮಿಸು. ನೀನೇ ಮುಂದೆ ಸಾಗಿಸುವವನೂ ಹಿಂದಕ್ಕೆ ತಳ್ಳುವವನೂ ಆಗಿರುವೆ. ನೀನೇ ಪ್ರತಿಯೊಂದರ ಮೇಲೆ ಅಧಿಕಾರ ಹೊಂದಿದವನಾಗಿರುವೆ.

ಇನ್ನೊಂದು ಪ್ರಾರ್ಥನೆ ಹೀಗಿದೆ: ಓ ಅಲ್ಲಾಹ್ ನಾನು ನನ್ನನ್ನು ನಿನ್ನ ವಶಕ್ಕೆ ನೀಡುತ್ತೇನೆ. ನಿನ್ನ ಮೇಲೆ ಭರವಸೆ ಇಡುತ್ತೇನೆ. ನಿನ್ನಲ್ಲಿ ವಿಶ್ವಾಸವಿರಿಸುತ್ತೇನೆ. ನಿನ್ನ ಕಡೆಗೆಯೇ ಬಾಗುತ್ತೇನೆ. ನಿನ್ನ ಸಹಾಯ ಪಡೆದುಕೊಂಡು ಎದುರಾಳಿಯೊಂದಿಗೆ ಚರ್ಚೆ ನಡೆಸುತ್ತೇನೆ. ನಿನ್ನ ಸನ್ನಿಧಿಯಲ್ಲಿಯೇ ನನ್ನ ಮೊಕದ್ದಮೆ ದಾಖಲಿಸುತ್ತೇನೆ. ನೀನು ನನ್ನ ಹಿಂದಿನ, ಮುಂದಿನ, ಬಹಿರಂಗವಾದ, ರಹಸ್ಯವಾದ ಎಲ್ಲಾ ಪಾಪಗಳನ್ನು ಕ್ಷಮಿಸು. ನೀನೇ ಆದಿಯೂ ಅನಂತವೂ ಆಗಿರುವೆ. ನಿನ್ನ ಹೊರತು ಅನ್ಯ ಆರಾಧ್ಯನಿಲ್ಲ.

اللَّهُمَّ إِنِّي أَعُوذُ بِكَ مِنْ قَلْبٍ لاَ يَخْشَعُ، وِمِنْ دُعَاءٍ لاَ يُسْمَعُ، وَمِنْ نَفْسٍ لاَ تَشْبَعُ، وَمِنْ عِلْمٍ لاَ يَنْفَعُ، أَعُوذُ بِكَ مِنْ هَؤُلاَءِ الأَرْبَعِ

**(ಅಲ್ಲಾಹುಮ್ಮ ಇನ್ನೀ ಅಊಝುಬಿಕ ಮಿನ್ ಖಲ್‌ಬಿನ್ ಲಾ ಯಖ್‌ಶಉ, ವಮಿನ್ ದುಆಇನ್ ಲಾ ಯುಸ್‌ಮಉ, ವ ಮಿನ್ ನಫ್‌ಸಿನ್ ಲಾ ತಶ್‌ಬಉ, ವ ಮಿನ್ ಇಲ್‌ಮಿನ್ ಲಾ ಯನ್‌ಫಉ, ಅಊಝುಬಿಕ ಮಿನ್ ಹಾವುಲಾಯಿಲ್ ಅರ್‌ಬಅ್.)**

ಓ ಅಲ್ಲಾಹ್, ವಿನಯವಿಲ್ಲದ ಹೃದಯದಿಂದಲೂ, ಅಂಗೀಕರಿಸಲ್ಪಡದ ಪ್ರಾರ್ಥನೆಯಿಂದಲೂ, ತೃಪ್ತಿಪಡೆಯದ ಜೀವದಿಂದಲೂ, ಲಾಭ ನೀಡದ ಜ್ಞಾನದಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ.

ಇನ್ನೊಂದು ಪ್ರಾರ್ಥನೆ: يَا مُقَلِّبَ الْقُلُوبِ ثَبِّتْ قَلْبِي عَلَى دِينِكَ **(ಯಾ ಮುಖಲ್ಲಿಬಲ್ ಖುಲೂಬಿ ಸಬ್ಬಿತ್ ಖಲ್‌ಬೀ ಅಲಾ ದೀನಿಕ)** – ಓ ಹೃದಯವನ್ನು ಬದಲಾಯಿಸುವವನೇ ನನ್ನ ಹೃದಯವನ್ನು ನಿನ್ನ ಧರ್ಮದಲ್ಲಿ ಸ್ಥಿರತೆಯಲ್ಲಿರಿಸು.

ಇನ್ನೊಂದು ಪ್ರಾರ್ಥನೆ: اللَّهُمَّ إِنِّي أَسْأَلُكَ الْهُدَى، وَالتُّقَى، وَالْعَفَافَ، وَالْغِنَى **(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್‌ಹುದಾ ವತ್ತುಖಾ, ವಲ್ ಅಫಾಫ ವಲ್‌ಗಿನಾ)** – ಓ ಅಲ್ಲಾಹ್, ನಾನು ನಿನ್ನಿಂದ ಮಾರ್ಗದರ್ಶನವನ್ನೂ ತಖ್ವವನ್ನೂ ಚಾರಿತ್ರ್ಯವನ್ನೂ ನಿರಪೇಕ್ಷತೆಯನ್ನೂ ಬೇಡಿಕೊಳ್ಳುತ್ತೇನೆ.

ಇನ್ನೊಂದು ಪ್ರಾರ್ಥನೆ: اللّٰهُمَّ اِنَّا نَجْعَلُکَ فِیْ نُحُوْرِهِمْ وَنَعُوْذُبِکَ مِنْ شُرُوْرِهِم **(ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಮ್ ವ ನಊಝುಬಿಕ ಮಿನ್ ಶುರೂರಿಹಿಮ್)** – ನಾವು ನಿನ್ನನ್ನು ಅವರ ಎದೆಗಳ ಮುಂದೆ ಇರಿಸುತ್ತೇನೆ. ನಿನ್ನ ಭಯ ಅವರ ಹೃದಯಗಳಲ್ಲಿ ತುಂಬಲಿ. ನಾವು ಅವರ ಕೆಡುಕುಗಳಿಂದ ನಿನ್ನ ಆಶ್ರಯವನ್ನು ಬೇಡಿಕೊಳ್ಳುತ್ತೇವೆ.

ಇನ್ನೊಂದು ಪ್ರಾರ್ಥನೆ: اللَّهُمَّ إِنِّي أَسْأَلُكَ حُبَّكَ وَحُبَّ مَنْ يُحِبُّكَ وَالْعَمَلَ الَّذِي يُبَلِّغُنِي حُبَّكَ اللَّهُمَّ اجْعَلْ حُبَّكَ أَحَبَّ إِلَيَّ مِنْ

نَفْسِي وَأَهْلِي وَمِنَ الْمَاءِ الْبَارِدِ **(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಹುಬ್ಬಕ, ವ ಹುಬ್ಬ ಮನ್ ಯುಹಿಬ್ಬುಕ, ವಲ್ ಅಮಲಲ್ಲಝೀ ಯುಬಲ್ಲಿಗುನೀ ಹುಬ್ಬಕ. ಅಲ್ಲಾಹುಮ್ಮಜ್‌ಅಲ್ ಹುಬ್ಬಕ ಅಹಬ್ಬು ಇಲಯ್ಯ ಮಿನ್ ನಫ್‌ಸೀ ವ ಅಹ್‌ಲೀ ವ ಮಿನಲ್ ಮಾಇಲ್ ಬಾರಿದ್.)**

ಓ ಅಲ್ಲಾಹ್, ನಾನು ನಿನ್ನಿಂದ ನಿನ್ನ ಪ್ರೀತಿಯನ್ನು ಬೇಡಿಕೊಳ್ಳುತ್ತೇನೆ. ನಿನ್ನನ್ನು ಪ್ರೀತಿಸುವವರ ಪ್ರೀತಿಯನ್ನು ಬೇಡಿಕೊಳ್ಳುತ್ತೇನೆ. ನಿನ್ನನ್ನು ತಲಪುವಂತೆ ಮಾಡುವ ಕೆಲಸದ ಪ್ರೀತಿಯನ್ನೂ ನಾನು ಬೇಡಿಕೊಳ್ಳುತ್ತೇನೆ. ನಿನ್ನ ಮೇಲಿನ ಪ್ರೀತಿ ನನಗೆ ನನ್ನ ಜೀವಕ್ಕಿಂತ, ಕುಟುಂಬಕ್ಕಿಂತ ಮತ್ತು ತಂಪಾದ ಸಿಹಿ ನೀರಿಗಿಂತ ಹೆಚ್ಚು ಪ್ರಿಯಕರವಾಗಲಿ.

ಇನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಪ್ರಾರ್ಥನೆಗಳನ್ನು ಪಠಿಸುವೆನು. ಅವರು ತನ್ನ ಒಬ್ಬ ಸಹಾಬಿಗೆ ಬರೆದ ಪತ್ರದಲ್ಲಿ ಈ ಅರಬಿ ದುಆ ಬರೆದಿದ್ದಾರೆ; ಆ ಸಹಾಬಿಯ ಹೆಸರು ಚೌಧರಿ ರುಸ್ತುಮ್ ಅಲಿ ಎಂದಾಗಿತ್ತು. **ಯಾ ಮನ್ ಹುವ ಅಹಬ್ಬು ಮಿನ್ ಕುಲ್ಲಿ ಮಹ್‌ಬೂಬಿನ್ ಇಗ್‌ಫಿರ್‌ಲೀ ವತುಬ್ ಇಲೈಯ್ಯ ವದ್‌ಖಿಲ್‌ನೀ ಫೀ ಇಬಾದಿಕಲ್ ಮುಖ್‌ಲಸೀನ್** – ನನ್ನ ಪ್ರೀತಿಗೆ ಪಾತ್ರರಾದ ಎಲ್ಲರಿಗಿಂತಲೂ ಹೆಚ್ಚು ನನಗೆ ಪ್ರಿಯನಾದವನೇ, ನನ್ನ ಪಾಪಗಳನ್ನು ಕ್ಷಮಿಸು. ನನ್ನ ಮೇಲೆ ಕಾರುಣ್ಯ ಸುರಿಸು. ನನ್ನನ್ನು ನಿನ್ನ ನಿಷ್ಠಾವಂತ ದಾಸರೊಂದಿಗೆ ಸೇರಿಸು.

ಮೇಲಿನ ದುಆದೊಂದಿಗೆ ಹೀಗೆ ಸಹ ಸೇರಿಸಿದ್ದಾರೆ: ನಾವು ನಿನ್ನ ಪಾಪಿಗಳಾದ ದಾಸರಾಗಿದ್ದೇವೆ. ನಮ್ಮ ಮೇಲೆ ನಮ್ಮ ಅಭಿಲಾಷೆಗಳು ಜಯಗಳಿಸಿವೆ. ನಮ್ಮನ್ನು ಕ್ಷಮಿಸು. ನಮ್ಮನ್ನು ಪರಲೋಕದ ವಿಪತ್ತುಗಳಿಂದ ರಕ್ಷಿಸು.

ಅಲ್ಲಾಹನೊಂದಿಗೆ ಸಮರ್ಪಣೆ ಮನೋಭಾವ ಬೆಳಸಲು ಈ ಪ್ರಾರ್ಥನೆಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕಲಿಸಿದ್ದಾರೆ: ಓ ಸರ್ವಲೋಕಗಳ ಪ್ರಭೂ, ನಾನು ನಿನ್ನ ಔದಾರ್ಯಗಳಿಗೆ ಕೃತಜ್ಞತೆ ಅರ್ಪಿಸಲು ಶಕ್ತನಲ್ಲ. ನೀನು ಅತ್ಯಂತ ರಹೀಮ್ ಮತ್ತು ಕರೀಮ್ ಆಗಿರುವೆ. ನೀನು ನನ್ನ ಮೇಲೆ ಅಪಾರ ಔದಾರ್ಯ ತೋರಿಸಿರುವೆ. ನನ್ನ ಪಾಪಗಳನ್ನು ಕ್ಷಮಿಸಿ ನನ್ನನ್ನು ನಾಶದಿಂದ ರಕ್ಷಿಸು. ನನ್ನ ಹೃದಯದಲ್ಲಿ ನಿನ್ನ ವಿಶಿಷ್ಟ ಪ್ರೀತಿ ಹಾಕು. ಆ ಮೂಲಕ ನನಗೆ ಜೀವ ಲಭಿಸುವಂತಾಗಲಿ. ನನ್ನ ಕುಂದುಕೊರತೆಗಳನ್ನು ಮರೆಮಾಡು. ನಿನ್ನ ಸಂಪ್ರೀತಿ ಗಳಿಸುವಂತ ಕೆಲಸಗಳನ್ನು ನನ್ನಿಂದ ಮಾಡಿಸು. ನಿನ್ನ ಕೋಪ ನನ್ನ ಮೇಲೆ ಎರಗದಿರಲಿ ಎಂದು ಬೇಡಿಕೊಳ್ಳುತ್ತೇನೆ. ನನ್ನ ಮೇಲೆ ಕರುಣೆದೋರು, ಕರುಣೆದೋರು, ಕರುಣೆದೋರು. ಇಹಪರ ಲೋಕದ ವಿಪತ್ತುಗಳಿಂದ ನನ್ನನ್ನು ರಕ್ಷಿಸು. ಪ್ರತಿಯೊಂದು ಅನುಗ್ರಹ ಮತ್ತು ಕಾರುಣ್ಯ ನಿನ್ನ ಕೈಯಲ್ಲೇ ಇದೆ – ಆಮೀನ್.

ನಾವು ಇಸ್ಲಾಮೀ ಲೋಕದ ಬಗ್ಗೆ ಸಹ ಪ್ರಾರ್ಥಿಸಬೇಕು. ಅಲ್ಲಾಹನು ಅವರಲ್ಲಿ ಐಕ್ಯತೆ ಉಂಟುಮಾಡಲಿ. ಒಡೆದುಹೋದ ಹೃದಯಗಳು ಜೋಡಿಸಲ್ಪಡಲಿ. ಅನ್ಯೋನ್ಯ ಶತ್ರುತ್ವ ಕೊನೆಗೊಳ್ಳಲಿ. ಶತ್ರುಗಳು ಇಸ್ಲಾಮಿಗೆ ಹಾನಿ ಉಂಟು ಮಾಡುವುದನ್ನು ಅಲ್ಲಾಹನು ತಡೆಯಲಿ. ಈಗ ಯಮನಿನ ವಿರುದ್ಧ ಪುನಃ ಆಕ್ರಮಣ ಜೋರಾಗಿ ಪ್ರಾರಂಭವಾಗಿದೆ. ಇರಾಖ್‌ನಲ್ಲಿ, ಸಿರಿಯಾದಲ್ಲಿ ಪಂಗಡಗಳ ಮತ್ತು ಗೋತ್ರಗಳ ಮಧ್ಯೆ ಭಿನ್ನಾಭಿಪ್ರಾಯವಿರುವ ಕಾರಣ ಮುಸ್ಲಿಮರು ಮುಸ್ಲಿಮರ ಕತ್ತು ಕತ್ತರಿಸುತ್ತಿದ್ದಾರೆ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾಸ್ತವಿಕ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ.

ಅಲ್ಲಾಹನು ಅಹ್ಮದಿಯರಲ್ಲಿ ಆತ್ಮ ಸಂತೃಪ್ತಿ ಸೃಷ್ಟಿಸಲಿ. ಪ್ರತಿಯೊಂದು ಕೆಡುಕಿನಿಂದ ರಕ್ಷಿಸಲಿ. ಅವರಿಗೆ ಸ್ಥಿರತೆಯನ್ನು ದಯಪಾಲಿಸಲಿ. ಅವರು ಸದಾ ಜಮಾಅತ್ ವ್ಯವಸ್ಥೆಯೊಂದಿಗೂ ಖಿಲಾಫತ್‌ನೊಂದಿಗೂ ಅಂಟಿಕೊಂಡಿರಲಿ. ಅಲ್ಲಾಹನು ನಮ್ಮನ್ನು ದಜ್ಜಾಲನ ಫಿತ್‌ನದಿಂದ ಸುರಕ್ಷಿತವಾಗಿಡಲಿ. ಅಲ್ಲಾಹನು ಅಹ್ಮದಿ ಶಹೀದ್‌ಗಳ ಪದವಿ ಉನ್ನತ ಗೊಳಿಸಲಿ. ಅವರ ಕುಟುಂಬದವರನ್ನು ರಕ್ಷಿಸಲಿ. ಬಂಧಿತರಾದವರು ಬೇಗನೇ ಬಿಡುಗಡೆ ಹೊಂದಲಿ. ಖಾದಿಯಾನ್‌ನಲ್ಲಿ ಸಹ ಕೆಲವರು ಕಷ್ಟದಲ್ಲಿದ್ದಾರೆ. ಅದೇ ರೀತಿ ಪಾಕಿಸ್ಥಾನದಲ್ಲಿನ ಅಹ್ಮದಿಯರು ಮತ್ತು ವಿಶಿಷ್ಟವಾಗಿ ರಬ್ವದ ಅಹ್ಮದಿಯರು ಸರಕಾರದ ವತಿಯಿಂದಲೂ ತೊಂದರೆಗಳಿಗೆ ಸಿಲುಕಿದ್ದಾರೆ. ಅವರನ್ನು ಕಷ್ಟದ ಮೇಲೆ ಕಷ್ಟಕ್ಕೆ ಗುರಿಪಡಿಸಲಾಗುತ್ತದೆ. ಅಲ್ಲಾಹನು ಅವರನ್ನು ಅಕ್ರಮಿಗಳಿಂದ ರಕ್ಷಿಸಲಿ. ಅಲ್ಲಾಹನು ಅಲ್ಲಿನ ಸ್ಥಿತಿ ಉತ್ತಮಗೊಳಿಸಲಿ.

ಅದೇರೀತಿ ಜಮಾಅತಿನ ವಿವಿಧ ತಹ್‌ರೀಕ್‌ಗಳಲ್ಲೂ ಜಮಾಅತ್ ಚಂದಾದಲ್ಲೂ ಸಾಂಪತ್ತಿಕ ಬಲಿದಾನಗಳನ್ನು ಅರ್ಪಿಸುವವರ ಸಂಪತ್ತಿನಲ್ಲೂ ಸಂತಾನದಲ್ಲಿಯೂ ಅಲ್ಲಾಹನು ಅನುಗ್ರಹ ನೀಡಲಿ. ಇಂದು ತಬ್ಲೀಗ್‌ಗೋಸ್ಕರ ಎಂ.ಟಿ.ಎ. ಬಹಳ ದೊಡ್ಡ ಕಾರ್ಯ ನಿರ್ವಹಿಸುತ್ತಿದೆ. ಅಲ್ಲಾಹನು ಎಂ.ಟಿ.ಎ.ದ ಕಾರ್ಯಕರ್ತರಿಗೂ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸುವವರಿಗೂ ಪ್ರತಿಫಲ ನೀಡಲಿ. ಅವರು ಮೊದಲಿಗಿಂತ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವವರಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 15-06-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon